**O. S. No: 65/2019**
**DW:2**

(ಇಂದು ದಿನಾಂಕಃ **09-12-2024** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಶ್ರೀ. ವ್ಹಿ ಟಿ ಕೆ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಸಲುವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿರುವ ವಿಷಯಗಳು ನಿಜ ಇರುತ್ತವೆ.

**ಪಾಟೀ ಸವಾಲುಃ ಶ್ರೀ.ಎಸ್ ಆರ್ ಹೆಚ್ ವಕೀಲರಿಂದಃ**

1 ನೇ ಪ್ರತಿವಾದಿಯ ತಂದೆಗೆ ಆಸ್ತಿಗಳು ಯಾವ ರೀತಿ ಬಂದಿರುತ್ತವೆ ಎಂದು ನನಗೆ ಮಾಹಿತಿ ಇಲ್ಲ. ನಾನು 1 ನೇ ಪ್ರತಿವಾದಿಯ ಮನೆಗೆ ಕೆಲಸಕ್ಕೆ ಹೋಗುವುದಿಲ್ಲ. ಆದರೇ ಮನೆಗೆ ಹೋಗಿ ಬರುತ್ತೇನೆ. 1 ನೇ ಪ್ರತಿವಾದಿಯ ತಂದೆ 1 ನೇ ಪ್ರತಿವಾದಿಗೆ ಆಸ್ತಿ ಬಿಟ್ಟುಕೊಟ್ಟ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಯಾವ ಸರ್ವೇ ನಂಬರ್ ನ ಆಸ್ತಿಗಳನ್ನು ಬಿಟ್ಟುಕೊಟ್ಟಿರುತ್ತಾರೆ ಎಂದು ನನಗೆ ಮಾಹಿತಿ ಇದೆ. ಸದರಿಯವರು ಆಸ್ತಿಗಳನ್ನು ಬಿಟ್ಟುಕೊಟ್ಟರು ಎಂದು ನನಗೆ ಯಾರು ಹೇಳಿರುವುದಿಲ್ಲ. ದಾವಾ ಜಮೀನುಗಳ ಚಕಬಂದಿ ಹೇಳಲಾಗುವುದಿಲ್ಲ. ಹೇಮರಡ್ಡಿಯ ಮಕ್ಕಳು ದಾವಾ ಆಸ್ತಿಗಳಲ್ಲಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ .**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**